ಪ್ರಕಟಣೆಗಾಗಿ

ಚಿತ್ರದುರ್ಗ, ಜ. 26 – ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯ ದಿನಾಚರಣೆ ಇವು ರಾಷ್ಟ್ರಭಕ್ತಿ ಮೂಡಿಸುವ ರಾಷ್ಟ್ರೀಯ ಹಬ್ಬಗಳು. ರಾಷ್ಟ್ರಭಕ್ತಿ ಕೇವಲ ತೋರ್ಪಡಿಕೆಯಾಗದೆ ದೇಶದ ಪ್ರತಿಯೊಬ್ಬ ನಾಗರೀಕನ ಆಂತರ್ಯದಲ್ಲಿರಬೇಕು ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಎಸ್.ಜೆ.ಎಂ. ಕ್ಯಾಂಪಸ್‌ನಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ, ಸಂಸ್ಥೆಯ ವಿವಿಧ ಶಾಲಾಕಾಲೇಜುಗಳ ವಿದ್ಯಾರ್ಥಿಗಳ ಪಥಸಂಚಲನದ ಗೌರವ ಸ್ವೀಕರಿಸಿ ಶ್ರೀಗಳು ಮಾತನಾಡಿದರು.

ನಮ್ಮೆಲ್ಲರಿಗು ಹೃದಯವಿದೆ. ಹೃದಯವೆಂದರೆ ಉಸಿರು ಮತ್ತು ರಕ್ತವನ್ನು ರವಾನಿಸುವ ಯಂತ್ರವೆಂದು ಬಹಳ ಜನರ ತಿಳವಳಿಕೆ. ಹೃದಯದೊಳಗೊಂದು ಹೃದಯ ಇದೆ. ಅದರೊಳಗೊಂದು ಬದುಕು ಇದೆ; ಭಾವನೆ ಇದೆ. ಅದರೊಳಗೆ ಮಿಡಿತವಿದೆಯೆಂಬ ಭಾವನೆ ಬರಬೇಕು. ಹೃದಯಶುದ್ಧಿಗೆ ಹೆಚ್ಚು ಮಹತ್ವ ನೀಡಬೇಕಾಗಿದೆ. ಹೃದಯವನ್ನು ಎರಡು ರೀತಿಯಲ್ಲಿ ಶುದ್ಧೀಕರಣ ಮಾಡುವುದು. ಮೊದಲನೆಯದು, ಹೃದಯದ ಆರೋಗ್ಯವನ್ನು ಕಾಪಾಡಿಕೊಳ್ಳುವುದು. ಎರಡನೆಯದು, ಹೃದಯ(ಅಂತರಂಗ)ದಲ್ಲಿ ರಾಗ-ದ್ವೇಷಗಳಿಗೆ ಅವಕಾಶ ನೀಡದಿರುವುದು. ಸಮಾಜದಲ್ಲಿ 3 ವಿಧವಾದ ಹೃದಯದವರನ್ನು ಕಾಣಬಹುದು.

1) ಸಂಕುಚಿತ ಹೃದಯಗಳು : ತುಂಬ ಸೀಮಿತವಾಗಿ ಯೋಚಿಸುವವರು. ಕೇವಲ ಸ್ವಾರ್ಥಪರವಾದ ಚಿಂತನೆಗಳು. ಒಮ್ಮೊಮ್ಮೆ ವಿಕೃತ ಭಾವನೆಗಳು. ರಾಗ-ದ್ವೇಷವನ್ನು ಆಂತರ್ಯದಲ್ಲಿ ಇಟ್ಟುಕೊಂಡು ಜೀವನವಿಡೀ ಅದನ್ನೇ ಸಾಧಿಸುತ್ತ ಸಾಗುವುದು. ಅನ್ಯರ ಕೈಗೊಂಬೆಯಾಗಿ ವರ್ತಿಸುತ್ತ ವಿಘ್ನಸಂತೋಷ ನೀಡುವುದು. ಚಾಡಿ ಹೇಳುವುದು, ಮೋಸ ಮಾಡುವುದು, ಅನ್ಯರ ಪ್ರಚೋದನೆಗೆ ಒಳಗಾಗಿ ತನಗೂ ಮತ್ತು ಸಂಸ್ಥೆಗೂ ವಂಚನೆ ಮಾಡುವುದು. ಜಾತಿಪದ್ಧತಿ ಅನುಸರಣೆಯಲ್ಲಿ ಮಡಿವಂತಿಕೆ ಆಚರಿಸುವುದು. ಅಸ್ಪೃಶ್ಯ ಭಾವನೆಗೆ ಅವಕಾಶ ನೀಡುವುದು. ಸಂಕುಚಿತ ಭಾವನೆಯಿಂದ ಹೊರಬರಲು `ವಿವೇಕೋದಯ' ಬೇಕು. ವಿವೇಕಮುಖಿ ಆಗುತ್ತಲೇ ಪರಿವರ್ತನೆಗೆ ಅವಕಾಶ. ಕಾಲಧರ್ಮವು ಕಟುಕ ಹೃದಯವನ್ನು ಕರಗಿಸುತ್ತದೆ. ಅದಕ್ಕಾಗಿ ಕಾಯಬೇಕಷ್ಟೆ.

2) ವಿಶಾಲ ಹೃದಯಿಗಳು : ಸಂಕುಚಿತ ಹೃದಯವು ವಿಕಾಸ ಆಗಿರುವುದಿಲ್ಲ. ವಿಶಾಲ ಹೃದಯಿಗಳ ಪ್ರಾಣವೇ ವಿಕಾಸ. ಹೃದಯ ವಿಕಾಸದಿಂದ ವ್ಯಕ್ತಿತ್ವ ವಿಕಾಸ. ವಿಕಾಸಯುಕ್ತ ಹೃದಯವು ವಿಶಾಲ ಹೃದಯ. ಎಲ್ಲರನ್ನು ಒಳಗೊಳ್ಳುವ ಪ್ರಕ್ರಿಯೆ ಮಹತ್ವ ಪಡೆದುಕೊಳ್ಳುತ್ತದೆ. ಜಾತಿ-ಮತ ಧರ್ಮದ ಬೇಲಿ ಇಲ್ಲದೆ ಎಲ್ಲರನ್ನು ಪ್ರೀತಿಸುವ ಔದಾರ್ಯವು ಇಲ್ಲಿ ಎದ್ದು ಕಾಣುತ್ತದೆ. ಕಪಟ, ಕುಹಕ ಮತ್ತು ಕೃತ್ರಿಮತನಕ್ಕೆ ಅವಕಾಶ ಇರುವುದಿಲ್ಲ. ನಿರ್ಮಲವಾದ ಹೃದಯ. ಮಾನವ ಮಾತ್ರರನ್ನಲ್ಲದೆ ಸಕಲ ಪ್ರಾಣಿಗಳನ್ನು ಪ್ರೀತಿಸುವ ಹೃದಯ. ಎಲ್ಲ ಹಂತದಲ್ಲು ಜೀವಪರ ಧೋರಣೆ.

ಈಚಿನ ದಿನಗಳಲ್ಲಿ ಮಾನವ ಪ್ರೀತಿ ಕಡಿಮೆ ಆಗುತ್ತಿದ್ದು, ಭೌತಿಕ ಪ್ರೀತಿ ಅಧಿಕವಾಗುತ್ತಿದೆ. ಭೌತಿಕತೆಯ ಬಗೆಗಿನ ವ್ಯಾಮೋಹವು ವ್ಯಕ್ತಿಯನ್ನು ಗುಲಾಮನನ್ನಾಗಿಸುತ್ತದೆ. ಕಾರಣ ವಿಶಾಲ ಹೃದಯಿಗಳು ಮಾನವೀಯ ಮಿಡಿತಗಳಿಗೆ ಆದ್ಯತೆ ನೀಡುತ್ತಾರೆ. ಸಜ್ಜನರ ಸಂಗ, ಉತ್ತಮ ಪುಸ್ತಕಗಳ ಅಧ್ಯಯನ, ಪ್ರಕೃತಿಯೊಂದಿಗಿನ ಒಡನಾಟ, ಪಕ್ಷಿ-ಪ್ರಾಣಿ ಪ್ರೀತಿ, ಧರ್ಮದ ಬಗೆಗೆ ಸರಿಯಾದ ತಿಳವಳಿಕೆಯಿಂದ ವಿಶಾಲ ಹೃದಯವನ್ನು ಹೊಂದಬಹುದು.

3) ಉದಾರ ಹೃದಯ : ಉದಾರ ಹೃದಯವು ಅನ್ಯರ ಕಷ್ಟಗಳನ್ನು ಅರ್ಥಮಾಡಿಕೊಳ್ಳಲು ಯತ್ನಿಸುತ್ತದೆ. ಅನ್ಯರು ಅನುಭವಿಸುವ ಕಷ್ಟ ನಷ್ಟವನ್ನು ಅರಿತುಕೊಂಡು, ಅವರ ಸಹಾಯಕ್ಕೆ ಮುಂದಾಗುತ್ತದೆ. ಕಷ್ಟ-ನಷ್ಟಗಳಿಗೆ ಸಹಕರಿಸುವ ಹೃದಯದಲ್ಲಿ ಜೀವಕಾರುಣ್ಯ ಸರ್ವೇಸಾಮಾನ್ಯ. ಮಂದಿಯ ಕಷ್ಟಕ್ಕಾಗಿ ಸಹಕರಿಸುವ ಔದಾರ್ಯ. ಮಿಡಿಯುವಿಕೆಯು ಪರಮಾರ್ಥ ಸಾಧಕಿಯಾದ ಅಕ್ಕನ ವಚನದಲ್ಲಿ ಹೀಗೆ ಮೂಡಿದೆ -

ಎರೆಯಂತೆ ಕರಕರಗಿ, ಮಳಲಂತೆ ಜರಿದರಿದು,

ಕನಸಿನಲ್ಲಿ ಕಳವಳಿಸಿ, ಆನು ಬೆರಗಾದೆ.

ಆವಿಗೆಯ ಕಿಚ್ಚಿನಂತೆ ಸುಳಿಸುಳಿದು ಬೆಂದೆ;

ಆಪತ್ತಿಗೆ ಸಖಿಯರನಾರನೂ ಕಾಣೆ.

ಅರಸಿ ಕಾಣದ ತನುವ, ಬೆರಸಿ ಕೂಡದ ಸುಖವ,

ಎನಗೆ ನೀ ಕರುಣಿಸಾ, ಚೆನ್ನಮಲ್ಲಿಕಾರ್ಜುನಾ.

ಎರೆಮಣ್ಣು ಮಳೆನೀರು ಬೀಳುತ್ತಲೆ ಕರಗುತ್ತದೆ. ಮರಳಿನ ರಾಶಿಯು ಜರಿಯುತ್ತ ಜರಿಯುತ್ತ ಹೋಗುತ್ತದೆ. ನಿರ್ಜೀವ ವಸ್ತುವಾದ ಮಣ್ಣು ಕರಗುವುದಾದರೆ ಮಾನವನೇಕೆ ಕರಗಬಾರದು? ಮಂದಿಯ ಕಷ್ಟಗಳಿಗಾಗಿ ಮರುಗುವವನು ಮತ್ತು ಸಹಕರಿಸುವವನು ನಿಜವಾದ ಮಾನವ. ಅವನಲ್ಲಿ ಒಬ್ಬ ಸಂತ, ಶರಣ ಮತ್ತು ಸಮಾಜ ಸುಧಾರಕ ಇರುತ್ತಾನೆ. ಸಹಕರಿಸುವ ಉದಾರ ಭಾವನೆಯುಳ್ಳವರೆ ಕರುಣಾಮಯಿಗಳು. ಆಪತ್ತಿಗೆ ಆಗುವವರೆ ನಿಜವಾದ ಸ್ನೇಹಿತರು. ಅವರೇ ಆಪತ್ಬಾಂಧವರು. ಕರುಣಾಮಯಿಗಳು ಮಾತ್ರ ಅನ್ಯರ ವೇದನೆ, ಯಾತನೆ ಮತ್ತು ಶೋಷಣೆ ನಿವಾರಿಸಲು ಜೀವನವಿಡೀ ಪ್ರಯತ್ನಿಸುತ್ತಾರೆ. ಅಂಥ ಜೀವಪರ ಕಾಳಜಿ ನಿಮ್ಮದಾಗಲಿ ಎಂದರು.

ವೇದಿಕೆಯಲ್ಲಿ ಚಂದ್ರಕಾಂತ ಚಟ್ಟಪಲ್ಲಿ, ಎಸ್.ಜೆ.ಎಂ. ಆಡಳಿತ ಮಂಡಳಿಯ ಕಾರ್ಯದರ್ಶಿ ಎ.ಜೆ. ಪರಮಶಿವಯ್ಯ, ಕಾರ್ಯನಿರ್ವಹಣಾಧಿಕಾರಿ ಎಂ.ಜಿ. ದೊರೆಸ್ವಾಮಿ, ಸದಸ್ಯರಾದ ಶ್ರೀಮತಿ ಗಾಯತ್ರಿ ಶಿವರಾಂ, ಶ್ರೀಮತಿ ರುದ್ರಾಣಿ ಗಂಗಾಧರ್, ಎಲ್.ಬಿ. ರಾಜಶೇಖರ್, ಶಾಲಾ-ಕಾಲೇಜುಗಳ ಮುಖ್ಯಸ್ಥರು ಇದ್ದರು.

ಇದೇ ಸಂದರ್ಭದಲ್ಲಿ ಪಿಹೆಚ್.ಡಿ. ಪಡೆದವರಿಗೆ, ಕ್ರೀಡೆ, ಸಾಂಸ್ಕøತಿಕ ಕಾರ್ಯಕ್ರಮಗಳಲ್ಲಿ ಸಾಧನೆಗೈದವರಿಗೆ, ನಿವೃತ್ತ ನೌಕರರಿಗೆ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ಪ್ರಬಂಧ ಮಂಡಿಸಿದವರಿಗೆ ಸನ್ಮಾನಿಸಲಾಯಿತು.

ಇದಕ್ಕು ಮುನ್ನ 22 ತಂಡಗಳಿಂದ ಆಕರ್ಷಕ ಪಥ ಸಂಚಲನ ನಡೆಯಿತು. ಪ್ರೌಢಶಾಲಾ ವಿಭಾಗದಲ್ಲಿ ಅತ್ಯುತ್ತಮವಾಗಿ ಪಥಸಂಚಲನ ನಡೆಸಿದ ಎಸ್.ಜೆ.ಎಂ. ಆಂಗ್ಲಮಾಧ್ಯಮ ಶಾಲೆ - (ಪ್ರಥಮ), ಎಸ್.ಜೆ.ಎಂ. ಪ್ರಿಯದರ್ಶಿನಿ ಬಾಲಕಿಯರ ಪ್ರೌಢಶಾಲೆ - (ದ್ವಿತೀಯ) ಮತ್ತು ಬೃಹನ್ಮಠ ಪ್ರೌಢಶಾಲೆ (ತೃತೀಯ) ಹಾಗು ಕಾಲೇಜು ವಿಭಾಗದಲ್ಲಿ ಎಸ್.ಜೆ.ಎಂ. ಫಾರ್ಮಸಿ ಕಾಲೇಜು - (ಪ್ರಥಮ), ಎಸ್.ಜೆ.ಎಂ. ದಂತ ಮಹಾವಿದ್ಯಾಲಯ - (ದ್ವಿತೀಯ) ಮತ್ತು ಎಸ್.ಜೆ.ಎಂ. ಮಹಿಳಾ ಮಹಾವಿದ್ಯಾಲಯ - (ತೃತೀಯ) ಬಹುಮಾನ ಪಡೆದರು.

ನಂತರ ವಿದ್ಯಾರ್ಥಿಗಳಿಂದ ದೇಶಭಕ್ತಿ ಮೂಡಿಸುವ ವಿವಿಧ ಸಾಂಸ್ಕøತಿಕ ಕಾರ್ಯಕ್ರಮಗಳು ಜರುಗಿದವು.

ರಮ್ಯ, ಮನೋಜ್‌ಕುಮಾರ್, ಮುಸೇಬ್ ಸಿದ್ಧಿಕ್ ಕಾರ್ಯಕ್ರಮ ನಿರೂಪಿಸಿದರು.